ಮೇಲೆ ಅವರು ಏಜೆನ್ಸಿಗೆ ಬರೆದ ಮೇಲೆ ಅವರು ಅದನ್ನು ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಇದೆ. ಅಲ್ಲಿಯವರೆಗೆ ಬೆಳೆ ಹಾಳಾಗುತ್ತದೆ. ಯಾರು ಬೆನಿಫಿಷರೀಸ್ ಶೇಂಗಾ ಬೆಳೆ ಹಾಕಿಕೊಂಡಿದ್ದಾರೋ ಅವರು ಇಲ್ಲಿ ಬೆಂಗಳೂರಿಗೆ ಇನ್‌ಫಾರಂ ಮಾಡತಕ್ಕಂಥ ವ್ಯವಸ್ಥೆಯನ್ನು ತಪ್ಪಿಸಿ ಲೋಕಲ್ಲಾಗಿ ಸರಿ ಮಾಡತಕ್ಕಂಥ ವ್ಯವಸ್ಥೆ ಆಗಬೇಕು. ಈ ಎರಡು ಪ್ರಶ್ನೆಗಳನ್ನು ಮಾನ್ಯ ಸಚಿವರಿಗೆ ಕೇಳುತ್ತಾ ಇದ್ದೇನೆ.

ಶ್ರೀ ಬಿ. ಶಿವಣ್ಣ.—ಈ ನಮ್ಮ ನಿಗಮದಿಂದ ಗುತ್ತಿಗೆಗಳನ್ನು ಕೊಡುತ್ತೇವೆ. ಬೇರೆ ಪೈವೇಟ್ ಏಜೆನ್ಸಿಗೆ ಕೂಡ ಕೊಡುತ್ತೇವೆ. ಅವರಿಗೆ ಆ ಪ್ರಕಾರ ಗ್ರಾಂಟ್ ಕೂಡ ಆಗುತ್ತದೆ. ಪೈವೇಟ್ ಏಜೆನ್ಸಿಗಳು ಮತ್ತು ಕೆ.ಐ.ಎಸ್. ಮುಖಾಂತರ ಮಾಡುತ್ತಾ ಇದ್ದೇವೆ.

ಶ್ರೀ ಕೆ. ಶಿವಮೂರ್ತಿ.—ಖರೀದಿ ಮಾಡಿರತಕ್ಕ ಸಾಮಾನುಗಳು ಅದೇ ಪ್ರಕಾರ ಇದೆಯೇ? ಅಟ್ಲಾಂಟ್ ಮಿಷಿನ್ ಎಂದು ತಿಳಿಸಿದ್ದೀರಿ, ಅಟ್ಲಾಂಟ್ ಮಿಷಿನ್ ಹಾಕಲೇ ಇಲ್ಲ. ಇದಕ್ಕೆ ಬ್ಯಾಂಕ್‌ನವರೂ ಕೂಡ ಅಬ್ಜೆಕ್ಟ್ ಮಾಡಿದ್ದಾರೆ. ಅವನ ರೈಟ್ ಪ್ರಕಾರ, ಇನ್‌ಸ್ಟ್ರಕ್ಷನ್ ಪ್ರಕಾರ, ಗೈಡ್‌ಲೈನ್ಸ್ ಪ್ರಕಾರ ಅಟ್ಲಾಂಟ್ ಮಿಷಿನ್ ಹಾಕಬೇಕು ಎಂದು ಇದೆ ಅದನ್ನು ಅವರು ತರಲಿಲ್ಲ. ಬೇರೆ ಮಿಷಿನ್‌ಗಳನ್ನು ತಂದು ಹಾಕುತ್ತಾ ಇದ್ದಾರೆ. ಕಳಪೆ ಸಾಮಾನುಗಳನ್ನು ತಂದು ಹಾಕುವುದರಿಂದ ಎಸ್.ಸಿ. ಎಸ್.ಟಿ. ಕಾರ್ಪೊರೇಷನ್ ಪತಿಯಿಂದ ಹಾಕಿದಂಥ ಬೋರ್ವೆಲ್‌ಗಳು ಪೂರ್ತಿಯಾಗಿ ಡೀಫಂಕ್ಟ್‌ಗಿ ನಿಂತು ಹೋಗಿವೆ. ಹೀಗೆ ನಿಂತಿರತಕ್ಕ ಬೋರ್ವೆಲ್‌ಗಳನ್ನು ರಿಪೇರಿ ಮಾಡಲಿಕ್ಕೆ ಒಂದೊಂದು ವರ್ಷ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇದನ್ನು ಸರಿ ಮಾಡಲಿಕ್ಕೆ ಏನು ಮಾಡುತೀರಿ ಎಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಅಟ್ಲಾಂಟ್ ಕಂಪನಿ ಏನಿದೆ ಅದು ಮಾನ್ಯತೆ ಪಡೆದಿರತಕ್ಕಂಥಾದ್ದು, ನಾವು ಕಂಪ್ಲೆಂಟ್ ಇದ್ದರೆ ಹೇಳಿ ಅದನ್ನು ಸರ್ಕಾರ ನೋಡುತ್ತದೆ.

ಶ್ರೀ ಕೆ. ಶಿವಮೂರ್ತಿ.—ಅವರು ಪರ್ಚೇಸ್ ಮಾಡಿರತಕ್ಕ ಸಾಮಾನುಗಳು ಇದೆಯೆಲ್ಲಾ ಅದು ಆ ಕಂಪನಿಯದು ಅಲ್ಲ. ಆದನ್ನೇ ಬ್ಯಾಂಕ್‌ನವರು ಅಬ್ಜೆಕ್ಟ್ ಮಾಡಿದ್ದಾರೆ.

ಶ್ರೀ ಬಿ. ಶಿವಣ್ಣ.—ಇದು ಅಟ್ಲಾಂಟ್ ಕಂಪನಿಯದು. ಆ ಕಂಪನಿಯವರು ನಮಗೆ ಸಪ್ಲೈ ಮಾಡುತ್ತಾರೆ. ಆ ಪ್ರಕಾರ ನಾವು ಯೂಸ್ ಮಾಡುತ್ತೇವೆ. ತಮಗೆ ಎಲ್ಲಾದರೂ ತೊಂದರೆಯಾಗಿದ್ದರೆ ತಿಳಿಸಿ.

ಶ್ರೀ ಕೆ. ಶಿವಮೂರ್ತಿ.—ಬೋರ್ವೆಲ್ ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಏನಿದೆ ಅದನ್ನು ಲೋಕಲ್ಲಾಗಿ ಏಕೆ ಮಾಡಬಾರದು. ಬೆಂಗಳೂರಿಗೆ ಏಕೆ ಕಳಿಸಬೇಕು. ಇದರಿಂದ ಒಂದೊಂದು ವರ್ಷ ರಿಪೇರಿ ಮಾಡುವುದಕ್ಕೆ ಲೇಟಾಗುತ್ತದೆ. ಇದರ ಬಗ್ಗೆ ಏನು ಹೇಳುತ್ತೀರಿ.

ಶ್ರೀ ಬಿ. ಶಿವಣ್ಣ.—ಒಮ್ಮೆ ಬಾವಿ ಕೊರೆದು ಅವರಿಗೆ ಕೊಟ್ಟಮೇಲೆ ರಿಪೇರಿ ಮಾಡುವುದಕ್ಕೆ ಒಂದು ವರ್ಷ ಗ್ಯಾರಂಟಿ ಇರುತ್ತದೆ. ಸಾಮಾನ್ಯವಾಗಿ ಏನಾದರೂ ಆಯಿತು ಅಂದರೆ ರಿಪೇರಿ ಮಾಡುತ್ತೇವೆ. ಆಮೇಲೆ ಕೂಡ ತೊಂದರೆಯಾಯಿತು ಎಂದು ಕಂಪ್ಲೆಂಟ್ ಮಾಡಿದರೆ ಅಲ್ಲಲ್ಲೇ ನಿಗಮದಿಂದ ಸಹಾಯ ಮಾಡುತ್ತಾರೆ.

ಶ್ರೀ ಕೆ. ಶಿವಮೂರ್ತಿ.—ರಿಪೇರಿ ಮಾಡುವುದಕ್ಕೆ ಒಂದು ವರ್ಷ ಕಾಲ ತೆಗೆದುಕೊಳ್ಳುತ್ತಾರೆ. ಲೋಕಲ್ಲಾಗಿ ಏಕೆ ರಿಪೇರಿ ಮಾಡಿಸುವುದಿಲ್ಲ. ಬೆಳೆ ಹಾಳಾಗುತ್ತದೆ, ಆದ್ದರಿಂದ ಲೋಕಲ್ಲಾಗಿ ರಿಪೇರಿ ಮಾಡತಕ್ಕಂಥ ವ್ಯವಸ್ಥೆ ಮಾಡಿ, ಇಲ್ಲಿ ಬೆಂಗಳೂರಿಗೆ ಏಕೆ ಬರಬೇಕು. ಮ್ಯಾನೇಜಿಂಗ್ ಡೈರೆಕ್ಟರ್ ಅಪ್ರೂವಲ್ ಏಕೆ ತೆಗೆದುಕೊಳ್ಳಬೇಕು,

ಶ್ರೀ ಬಿ. ಶಿವಣ್ಣ.—ಅದನ್ನು ಸರ್ಕಾರದಲ್ಲಿ ವಿಚಾರ ಮಾಡುತ್ತೇವೆ.

ಕೋಲಾರ ಜಿಲ್ಲೆಯ ವಡ್ಡಹಳ್ಳಿ ಗ್ರಾಮದ ಬಳಿ ಉಕ್ಕಡ ಕಚೇರಿ ಪ್ರಾರಂಭ

೨೧೦. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ವಡ್ಡಹಳ್ಳಿ ಗ್ರಾಮದ ಹತ್ತಿರ ತನಿಖಾ ಠಾಣೆಯನ್ನು ತೆರೆದಿರುವುದೇ ?

ಆ) ಹಾಗಿದ್ದಲ್ಲಿ, ರಾಜ್ಯದ ಗಡಿಯ ನಂಗಲಿ ಪಕ್ಕಿರದಲ್ಲಿರುವ ತನಿಖಾ ಠಾಣೆಯು ಸೂಕ್ತವಾದ ಸ್ಥಳವಾಗಿದ್ದರೂ ಸಹ ಅದಕ್ಕೆ ಬದಲಾಗಿ ಈ ಮೇಲಿನ ಸ್ಥಳವನ್ನು ಆಯ್ದುಕೊಳ್ಳಲು ಬಲವತ್ತರವಾದ ಕಾರಣಗಳಿವೆಯೇ ?

ಇ) ರಾಜ್ಯ ಸರಹದ್ದಿನ ಹತ್ತಿರವಿರುವ ನಂಗಲಿ ಮತ್ತು ಪುಂಗನೂರು ಸ್ಥಳಗಳಲ್ಲಿ ಎರಡೂ ತನಿಖಾ ಠಾಣೆಗಳನ್ನು ತೆರೆಯಲು ಸರ್ಕಾರವು ಪರಿಗಣಿಸುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮಂತ್ರಿಗಳು).—

ಆ) ಹೌದು.

ಆ) ಕೋಲಾರ ಜಿಲ್ಲೆಯ ಅನೇಕ ಸ್ಥಳಗಳಿಂದ ಆಂಧ್ರಪ್ರದೇಶಕ್ಕೆ ವರ್ಷವಿಡೀ ಹೆಚ್ಚಿನ ಸಂಖ್ಯೆಯಲ್ಲಿ ಭತ್ತ, ಅಕ್ಕಿ, ಬೆಲ್ಲ, ಇತ್ಯಾದಿ ಸರಕುಗಳ ಸಾಗಣೆಯನ್ನು ತಡೆಯುವ ಸಲುವಾಗಿ ಮತ್ತು ಅಕ್ರಮವಾಗಿ ವಸ್ತುಗಳ ಸಾಗಾಣಿಕೆ ಮಾಡುವುದನ್ನು ತಡೆಯುವುದಕ್ಕಾಗಿ ಹಾಗೂ ನಿಯಮಗಳಿಗನುಸಾರ ತೆರಿಗೆಯನ್ನು ವಿಧಿಸುವ ಸಲುವಾಗಿ ಪಡ್ಡರ ಹಳ್ಳಿಗೆ ಬದಲಾಗಿ ನಂಗಲಿಯು ಬಳಿ ತನಿಖಾ ಠಾಣೆಯನ್ನು ತೆರೆಯಲಾಗಿದೆ.

ಇ) ಇಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಸ್ವಾಮಿ, ಚೆಕ್‌ಪೋಸ್ಟ್‌ಗಳಲ್ಲಿ ಏನಾಗಿದೆ ಅಂದರೆ, ಲಾರಿಗಳನ್ನು ನಿಲ್ಲಿಸಿ, ಹಣ ತೆಗೆದುಕೊಂಡು ರಸೀದಿ ಕೊಡದೇ ಬಿಡುತ್ತಾರೆ. ಒಂದು ಲಾರಿಗೆ ೧೦೦–೨೦೦ ತೆಗೆದುಕೊಳ್ಳುತ್ತಾರೆ ಚೆಕ್‌ಪೋಸ್ಟ್‌ಗಳಲ್ಲಿ ಕೆಲಸ ಮಾಡುವವರ ಮೇಲೆ ಚೆಕಿಂಗ್ ಏನಾದರೂ ಇಡುವಂಥ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಸ್ವಾಮಿ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಒದಗಿಸಿದ್ದೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ವಿ. ವಿ. ವೆಂಕಟಪ್ಪ.—ಅಗಬಹುದು, ಪಡ್ಡಹಳ್ಳಿಯ ಹತ್ತಿರ ಚೆಕ್‌ಪೋಸ್ಟ್ ಮಾಡುವ ವಿಚಾರದ ಬಗ್ಗೆ ಏನು ಹೇಳಂತ್ತೀರಿ ? ಅಂತೆ ರಾಜ್ಯದ ಗಡಿ ಪ್ರದೇಶಗಳಾದ ನಂಗಲಿ ಮತ್ತು ಪುಂಗನೂರಿನಲ್ಲಿ ಉಕ್ಕಡ ಕಛೇರಿಗಳನ್ನು ತೆರೆಯಲು ಯೋಚಿಸಿದ್ದೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಇನ್ನೂ ಮಾಡಿಲ್ಲ, ತಾವು ಹೇಳಿರತಕ್ಕ ಎರಡೂ ಸ್ಥಳಗಳಲ್ಲಿ ಲಾರಿಗಳ ಮೂವ್‌ಮೆಂಟ್ ಎಷ್ಟಿದೆ ನೋಡಿಕೊಂಡು, ಅವಶ್ಯಕತೆ ಇದ್ದರೆ ಉಕ್ಕಡ ಕಛೇರಿಗಳನ್ನು ತೆರೆಯುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಇದು ನ್ಯಾಷನಲ್ ಹೈವೇ ಇದ್ದು ಬಹಳ ಟ್ರಾಫಿಕ್ ಇರುತ್ತದೆ. ೪–೫ ಆಕ್ಸಿಡೆಂಟುಗಳಲ್ಲಿ ೭–೮ ಜನ ಸತ್ತು ಹೋಗಿದ್ದಾರೆ. ರಸ್ತೆ ಸೈಡಿನಲ್ಲಿ ಈ ಕಛೇರಿಯನ್ನು ಹಾಕಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI M. RAJASHEKARA MURTHY.—That will be examined.

ಬೆಂಗಳೂರಿನ ಹೊರವಲಯಕ್ಕೆ ರೇಸ್ ಕೋರ್ಸ್‌ನ ಸ್ಥಳಾಂತರ

*೫೫. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ಬೆಂಗಳೂರು ರೇಸ್‌ಕೋರ್ಸನ್ನು ಈಗಿರುವ ಸ್ಥಳದಿಂದ ಬೆಂಗಳೂರು ನಗರದ ಹೊರವಲಯಕ್ಕೆ ಸ್ಥಳಾಂತರಿಸಲು ಸರ್ಕಾರವು ತೀರ್ಮಾನ ತೆಗೆದುಕೊಂಡಿದೆಯೆ ?

ಆ) ಹಾಗಿಲ್ಲದಿದ್ದಲ್ಲಿ, ಈ ರೇಸಕೋರ್ಸನ್ನು ಸ್ಥಳಾಂತರಿಸುವ ಮತ್ತು ಆ ಸ್ಥಳವನ್ನು ಮಕ್ಕಳ ಮನರಂಜನಾ ಉದ್ಯಾನವನವನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಮಂತ್ರಿಗಳು).—

ಆ) ಸರ್ಕಾರ ನಿರ್ಧರಿಸಲ್ಲಿ ರೇಸಕೋರ್ಸನ್ನು ಸ್ಥಳಾಂತರಿಸಲು ತೀರ್ಮಾನಿಸಿದೆ.

ಆ) ರೇಸ್‌ಕೋರ್ಸನ್ನು ಸ್ಥಳಾಂತರಿಸಿದಲ್ಲಿ, ಆ ಪ್ರದೇಶದ ಉಪಯೋಗದ ಬಗ್ಗೆ ಸರ್ಕಾರ ಪರಿಶೀಲಿಸುವುದು.